ಶ್ರೀ ಸಿದ್ದರಾಮಯ್ಯ : ಅಯ್ಯೋ ನಮ್ಮದೇ ಸರ್ಕಾರ ನೋಡಿಲ್ಲವಾ? ಎಷ್ಟು ಸಾರಿ ಅದನ್ನು ನೋಡಿದ್ದೇವೆ. ಲೋಕಾಯುಕ್ತ ಪೊಲೀಸರೇ 'ಬಿ' ರಿಪೋರ್ಟ್ ಹಾಕಿಕೊಂಡು ಕುಳಿತುಕೊಂಡಿದ್ದಾರೆ. ಎಲ್ಲಿ ನಿಮಗೆ ಕೊಡುತ್ತಾರೆ?

ಶ್ರೀ ಗೋವಿಂದ ಎಂ. ಕಾರಜೋಳ : ಹಾಗಿದ್ದರೆ, ಆ ಸಂಸ್ಥೆಯನ್ನು ಆಗಲೇ ಮುಚ್ಚಬಹುದಾಗಿತ್ತು.

ಶ್ರೀ ಸಿದ್ದರಾಮಯ್ಯ : ಆದ್ದರಿಂದ C.B.I. ಗೆ ಕೊಡಿ. If Government is not agreeable for the CBI enquiry ಅದು ಹೋಗುವುದಿಲ್ಲ. ಈ ರೀತಿ ಉತ್ತರ ಕೇಳಿಕೊಂಡು ಸುಮ್ಮನೆ ಕುಳಿತುಕೊಂಡಿರ ಬೇಕಾ? ನೀವೇ ಹೇಳಿ. ನಿಮಗೂ ಸಮಾಧಾನವಿಲ್ಲ ನನಗೆ ಗೊತ್ತಿರುವ ಮಟ್ಟಿಗೆ. You are also not happy with the reply given by the Minister.

ಉಪಾಧ್ಯಕ್ಷರು : ಇಲ್ಲಿ ಒಂದು ಮಾತನ್ನು ಅವರು ಹೇಳಿದರು.

ಶ್ರೀ ಸಿದ್ದರಾಮಯ್ಯ : ಏನು ಉಪಾಧ್ಯಕ್ಷರೆ?

ಉಪಾಧ್ಯಕ್ಷರು : C.I.D. enquiry ನಡೆಸಿ. ತೃಪ್ತಿ ಆಗದಿದ್ದರೆ, ನಂತರದ ಹೆಜ್ಜೆ ಇಡುತ್ತೇವೆಂದು ಹೇಳಿದರು.

ಶ್ರೀ ಸಿದ್ದರಾಮಯ್ಯ : ಇನ್ನು ಯಾವ ತೃಪ್ತಿ? ಮುಚ್ಚಿ ಹಾಕಿದ ಮೇಲೆ ಯಾವ ತೃಪ್ತಿ ಆಗುತ್ತದೆ? Where is it in the matter?

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ಅದೊಂದು option ಇಟ್ಟಿದ್ದಾರೆ, open ಎಂದು ಹೇಳಿದ್ದಾರೆ. ನೀವು ಒಂದು ಕೆಲಸ ಮಾಡಿ. ಇಷ್ಟು ದಿವಸಗಳಲ್ಲಿ ನಾವು C.I.D. enquiry ಮುಗಿಸುತ್ತೇವೆ. ಅದರಲ್ಲಿ ನಮಗೆ ಸಮಾಧಾನವಾಗಲಿಲ್ಲವೆಂದರೆ, ಮುಂದೆ ಯೋಚನೆ ಮಾಡುತ್ತೇವೆಂದು ಅದನ್ನಾದರೂ ಹೇಳಿ ಉಪಾಧ್ಯಕ್ಷರೆ.

ಶ್ರೀ ಸಿದ್ದರಾಮಯ್ಯ : ನಾವು 20 ವರ್ಷ ನೋಡಿದ್ದೇವೆ. ಈ C.I.D. ಯಿಂದ ಏನೇನೂ ಆಗುವುದಿಲ್ಲ. It is my experience and ನಿಮಗೂ experience ಆಗಿದೆ. ಸರ್ಕಾರದ ಪರವಾಗಿ ಹೇಳಬೇಕಲ್ಲ ಹೇಳುತ್ತಿದ್ದೀರಿ. ಆದರೆ ನಿಮ್ಮ ಉತ್ತರದಿಂದ ಈ ರಾಜ್ಯದ ಜನತೆಗೂ ಸಮಾಧಾನವಿಲ್ಲ. ನನಗೂ ಸಮಾಧಾನವಿಲ್ಲ. ಮಾನ್ಯ ಮಂತ್ರಿಗಳಿಗೆ ಕಠಿಣವಾದ ನಿರ್ಣಯ

ಗಳನ್ನು ತೆಗೆದುಕೊಳ್ಳುವುದಕ್ಕೆ ಮನಸ್ಸಿಲ್ಲ. I don't know, ನೀವು ರಾಜೀನಾಮೆ ಕೊಡುವುದೂ ಇಲ್ಲ, ನನಗೆ ಗೊತ್ತಿದೆ. ಕೊಡಬೇಡಿ, ಇರಿ ಪಾಪ. ಆದರೆ, C.B.I.ಗಾದರೂ ಒಪ್ಪಿಕೊಳ್ಳಿ ಹೋಗಲಿ. ಇವರ ಉತ್ತರದಿಂದ ಸಮಾಧಾನ ವಾಗಿಲ್ಲ, ಮಾನ್ಯ ಉಪಾಧ್ಯಕ್ಷರೆ, we will protest and walk out. ನಿಮಗೆ seriousness ಇಲ್ಲ.

(ಕಾಂಗ್ರೆಸ್ ಪಕ್ಷದ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 7 ಗಂಟೆ 12 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 27.03.2012 ರಂದು ಬೆಳಗ್ಗೆ 11–00 ಗಂಟೆಗೆ ಸೇರಲು ನಿಃಶ್ಚಯಿಸಿತು)

(ಆ) ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಗಳು.

ಬ್ಯಾರಿ, ಕೊಂಕಣಿ ಮತ್ತು ತುಳು ಅಕಾಡೆಮಿಗಳಿಗೆ ಅಧ್ಯಕ್ಷ/ಸದಸ್ಯರ ನೇಮಕ

12. ಅನುಬಂಧಗಳು :

ಅನುಬಂಧ – I

17 (46) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ಯಾರಿ, ಕೊಂಕಣಿ ಮತ್ತು ತುಳು ಅಕಾಡೆಮಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಅವರುಗಳ ಹೆಸರು ಮತ್ತು ವಿಳಾಸಗಳೇನು (ವಿವರ ಒದಗಿಸುವುದು);

ಇ) ಹಾಗಿದ್ದಲ್ಲಿ, ಇದುವರೆವಿಗೂ ನೇಮಕಾತಿ ಮಾಡದೇ ಇರಲು ಕಾರಣಗಳೇನು?